STATEMENT SHOWING THE DISTRICT-WISE AREA UNDER SALINE SOILS IN THE STATE.

Sl. No.	District	Saline Soils (in Hectares)
1.	Bangalore (urban)	610
2.	Bangalore (Rural)	1379
3.	Belgaum	2891
4.	Bidar	4113
5.	Bellary	16114
6.	Bijapur	8165
7.	Chitradurga	7451
8.	Chickmagalur	1006
9.	Dharwad	6552
10.	Dakisha Kannada	3260
11.	Gulbarga	6134
12.	Hassan	1704
13.	Kodagu	-
14.	Kolar	2134
15.	Mandya	2944
16.	Mysore	4178
17.	Raichur	13065
18.	Shimoga	1190
19.	Tumkur	4462
20.	Utter Kannada	7333
	Total	94,685

ಪ್ರವಾಹ, ಮಳೆ ಪರಿಹಾರ ಕಾರ್ಯಕ್ಕೆ ಕೇಂದ್ರದಿಂದ ಸಹಾಯಧನ

605 (1190) ಶ್ರೀ ವಾಟಾಳ್ ನಾಗರಾಜ್:- (ಚಾಮರಾಜನಗರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಇತ್ತೀಚಿನ ಪ್ರವಾಹ, ಮಳೆ ಪರಿಹಾರ ಕಾರ್ಯಕ್ಕೆ ಕೇಂದ್ರದಿಂದ ಇಲ್ಲಿವರೆವಿಗೆ ಬಂದಿರುವ ಸಹಾಯ ಧನ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಇಲಾಖೆ)

ಅ) 20.25 ಕೋಟಿ ರೂ. ಗಳು

ಪರಿಶುದ್ಧ ಹಾಲು ಒದಗಿಸುವುದಕ್ಕೆ ತೆಗೆದುಕೊಂಡ ಕ್ರಮಗಳು

606 (1191) ಶ್ರೀ ವಾಟಾಳ್ ನಾಗರಾಜ್:- (ಚಾಮರಾಜನಗರ) ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನರಿಗೆ ಪರಿಶುದ್ಧ ಹಾಲು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್:- (ಪಶು ಸಂಗೋಪನಾ, ಪಶು ವೈದ್ಯ ಸೇವಾ ಸಚಿವರು)

ಆ) ಕರ್ನಾಟಕ ಹಾಲು ಮಹಾ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಉತ್ಪಾದಕರಿಂದ ಶೇಖರಿಸುವ ಹಾಲಿನ ಗುಣಮಟ್ಟವನ್ನು ದಿನಂ ಪ್ರತಿ ಎರಡು ಬಾರಿ ಸಂಘದಲ್ಲಿಯೇ ಪರೀಕ್ಷಿಸಿ, ಶುದ್ಧ ಹಾಲನ್ನು ಶೇಖರಿಸಿ ಸಮೀಪದ ಹಾಲು ಶೀಥಲೀಕರಣ ಕೇಂದ್ರ ಹಾಗೂ ಡೇರಿಗಳಿಗೆ ಸಾಗಿಸಲಾಗುತ್ತಿದೆ. ಈ ಹಾಲನ್ನು ಶೀಥಲೀಕರಣ ಕೇಂದ್ರ ಮತ್ತು ಡೇರಿಗಳಲ್ಲಿ ಮತ್ತೊಮ್ಮೆ ಅದರ ಗುಣಮಟ್ಟವನ್ನು ಪರೀಕ್ಷೆಮಾಡಿ ವೈಜ್ಞಾನಿಕ ರೀತಿಯಲ್ಲಿ ಪಾಶ್ಚೀಕರಿಸಿ ಪ್ಯಾಕೆಟ್‌ಗಳಲ್ಲಿ ಭರ್ತಿಮಾಡಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಸಂಘ ಮತ್ತು ಡೇರಿಗಳಲ್ಲಿ ಹಾಲಿನ ಗುಣ ಮಟ್ಟವನ್ನು ಪರೀಕ್ಷಿಸಲು ಸೂಕ್ತ ತಾಂತ್ರಿಕ ವರ್ಗದವರನ್ನು ನೇಮಿಸಲಾಗಿದೆ. ಇದಲ್ಲದೆ ಚಟುವಟಿಕೆಗಳ ಮೂಲಕ ಹಾಲು ಉತ್ಪಾದಕರಿಗೆ ಶುದ್ಧ ಹಾಲು ಶೇಖರಣೆ ಬಗ್ಗೆ ಮತ್ತು ಉತ್ಪಾದನೆ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ಬರಪರಿಹಾರ ಕಾಮಗಾರಿಗಳಿಗೆ ಬಿಡುಗಡೆಯಾದ ಹಣ

607 (1140) ಶ್ರೀ ದಿವಟರ ಮಲ್ಲಿಕಾರ್ಜುನ ಬಸಪ್ಪ:- (ಕೊಪ್ಪಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1991-92 ನೇ ಸಾಲಿಗೆ ರಾಜ್ಯ ಸರ್ಕಾರದಿಂದ ಬರ ಪರಿಹಾರ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

(ಆ) ಬರಪರಿಹಾರ ಕಾಮಗಾರಿಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಕೈಗೊಂಡಿರುವ ಕೆಲಸಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.- (ಕಂದಾಯ ಮಂತ್ರಿಗಳು)

ಅ) ರೂ. 1444.00 ಲಕ್ಷಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿರುವ ಮೊತ್ತ (ರೂ. ಲಕ್ಷಗಳಲ್ಲಿ)
(1)	ಬೆಂಗಳೂರು ನಗರ	41.50
(2)	ಬೆಂಗಳೂರು ಗ್ರಾಮಾಂತರ	35.00
(3)	ಕೋಲಾರ	54.50
(4)	ತುಮಕೂರು	28.50
(5)	ಚಿತ್ರದುರ್ಗ	46.00
(6)	ಶಿವಮೊಗ್ಗ	21.50
(7)	ಮೈಸೂರು	42.50
(8)	ಮಂಡ್ಯ	37.50
(9)	ಚಿಕ್ಕಮಗಳೂರು	32.50
(10)	ಹಾಸನ	33.50
(11)	ಕೊಡಗು	11.00
(12)	ದಕ್ಷಿಣ ಕನ್ನಡ	28.00
(13)	ಗುಲ್ಬರ್ಗಾ	263.50